ಮಕ್ಕಳು ಯಾವಾಗ ಮತ್ತು ಹೇಗೆ ಕಲಿಯುತ್ತಾರೆ ಎಂಬುದರ ಅರ್ಥೈಸುವಿಕೆ

ರಿತಿಕಾ ಗುಪ್ತಾ

ಒಂದು ಹೆಣ್ಣು ಮಗು ತನ್ನ ಕೈಯನ್ನು ತದೇಕಚಿತ್ತದಿಂದ ನೋಡುತ್ತ, ಅದನ್ನು ಒಮ್ಮೆ ಅಲುಗಾಡಿಸುತ್ತಾ ತನ್ನ ಬಾಯಿಯ ಸನಿಹ ತಂದು ಬೆರಳುಗಳನ್ನು ಚೀಪುತ್ತದೆ. ಬಾಯಿಯಿಂದ ಕೈಬೆರಳುಗಳನ್ನು ಹೊರತೆಗೆದು ಕೈಯನ್ನು ಮತ್ತೊಮ್ಮೆ ನೋಡಿಕೊಂಡು ಸಣ್ಣಗೆ ಕಿರುಚಿಕೊಳ್ಳುತ್ತದೆ. ಎರಡು ವರ್ಷದ ಪುಟ್ಟ ಮಗು ತನ್ನ ಅಕ್ಕ ಹೇಳಿದ ಎಲ್ಲವನ್ನೂ ಪುನರಾವರ್ತನೆ ಮಾಡುತ್ತದೆ ಮತ್ತು ಕಿಲಕಿಲ ನಗುತ್ತದೆ. ಮರಳಿನ ಮೇಲೆ ಕುಳಿತ ನಾಲ್ಕು ವರ್ಷದ ಮಗು ಒಂದು ಪುಟ್ಟ ಪಾತ್ರೆಯಲ್ಲಿ ಮರಳನ್ನು ತುಂಬಿಸುವುದು ಮತ್ತು ಚೆಲ್ಲುವುದು ಮಾಡುತ್ತಿರುತ್ತದೆ. ಐದು ವರ್ಷದ ಹುಡುಗ ಕೈಯಲ್ಲಿ ಸುತ್ತಿಗೆ ಹಿಡಿದುಕೊಂಡು ತನ್ನ ಮನೆಯ ಸುತ್ತಲೂ ನಾನಾ ವಸ್ತುಗಳಿಗೆ ಅದನ್ನು ಬಡಿಯುತ್ತಾ ತನ್ನ ತಾಯಿಯನ್ನು ನೋಡುತ್ತಿದ್ದಾನೆ. ಆರು ವರ್ಷದ ಹುಡುಗಿಯೊಬ್ಬಳು ತಾನು ಅಮ್ಮನ ಬಾಲವೇನೋ ಎಂಬಂತೆ ಆಕೆಯ ಹಿಂದೆಯೇ ಹೋಗುತ್ತಿದ್ದಾಳೆ. ಹದಿಮೂರು ವರ್ಷ ವಯಸ್ಸಿನ ಮಕ್ಕಳಿಬ್ಬರು ಪರಸ್ಪರ ಹತ್ತಿರ ಕುಳಿತು ಆಟಿಕೆಗಳೊಂದಿಗೆ ಆಟವಾಡುತ್ತಿದ್ದಾರೆ. ಹದಿನಾರು ವರ್ಷದ ಹುಡುಗ ಪದೇಪದೇ ಚೆಂಡನ್ನು ಗೋಡೆಯತ್ತ ಒದೆಯುತ್ತಿದ್ದಾನೆ.

ಮಕ್ಕಳು ಆಗಾಗ ಈ ರೀತಿಯ ಚಟುವಟಿಕೆಗಳಲ್ಲಿ ತೊಡಗಿ–ಕೊಳ್ಳುವುದು ಹಿರಿಯರ ಕಣ್ಣಿಗೆ ಅರ್ಥವಿಲ್ಲದಂತೆ ಕಾಣುತ್ತಿರುತ್ತದೆ. ‘ಓಹ್! ಅವನು ಹಗಲುಗನಸು ಕಾಣುತ್ತಿದ್ದಾನೆ’, ‘ಆತ ಆಟವಾಡುತ್ತಿದ್ದಾನೆ’ ಅಥವಾ ‘ಆತ ಸುಮ್ಮನೇ ಕಾಲಹರಣ ಮಾಡುತ್ತಿದ್ದಾನೆ’ ಎಂಬುದಾಗಿ ಈ ಚಟುವಟಿಕೆಗಳನ್ನು ಸಾಮಾನ್ಯವಾಗಿ ವ್ಯಾಖ್ಯಾನಿಸಲಾಗುತ್ತದೆ. ಮೇಲೆ ಪ್ರಸ್ತಾಪ ಮಾಡಿದ ಪರಿಸ್ಥಿತಿಗಳಲ್ಲಿ ಮಗುವು ಏನನ್ನು ಕಲಿಯಲು ಸಾಧ್ಯ ಎಂದು ಯಾರಾದರೂ ಯೋಚಿಸಬಹುದು. ಕಲಿಕೆಯ ಬಗ್ಗೆ ಮಾತನಾಡುವ ಸಂದರ್ಭದಲ್ಲಿ, ನಾವು ಸ್ವಾಭಾವಿಕವಾಗಿ ಒಂದು ಮಗು ಪುಸ್ತಕಗಳಲ್ಲಿ ತಲ್ಲೀನವಾಗಿರುವ, ಹೋಮ್‌ವರ್ಕ್ ಮಾಡುತ್ತಿರುವ, ದೊಡ್ಡವರ ಮಾತನ್ನು ಕೇಳುತ್ತಿರುವ ಅಥವಾ ಬಾಯಿಪಾಠ ಮಾಡಿದ್ದನ್ನು ಹೇಳುವ ಚಿತ್ರವನ್ನೇ ಕಲ್ಪಿಸಿಕೊಳ್ಳುತ್ತೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಕಲಿಕೆಯು ಕೇವಲ ಒಂದು ಫಲಿತಾಂಶವಲ್ಲ, ಅದು ನಿರಂತರ ಚಾಲ್ತಿಯಲ್ಲಿರುವ ಪ್ರಕ್ರಿಯೆ ಎಂಬುದನ್ನು ಕೂಡ ನಾವು ತಿಳಿದುಕೊಳ್ಳಬೇಕಾಗುತ್ತದೆ.

ಮನುಷ್ಯ ಜನ್ಮತಃ ಕುತೂಹಲಿ ಮತ್ತು ಅನ್ವೇಷಿಸುವ ಸ್ವಭಾವದವನು. ಮಕ್ಕಳು ಬಾಲ ವಿಜ್ಞಾನಿಗಳಂತೆ ಅದರಲ್ಲೂ ಶಿಶುಗಳು ಪರಿಶೋಧನೆ ಮಾಡುವ ಪ್ರಯತ್ನದಲ್ಲಿ ಮತ್ತು ಜ್ಞಾನವನ್ನು ಪಡೆಯುವ ಹೊತ್ತಿನಲ್ಲಿ ಪ್ರಯೋಗಗಳನ್ನು ಮಾಡುತ್ತಿರುತ್ತವೆ. ಉದಾಹರಣೆಗೆ, ತನ್ನ ಕೈಗೆ ಸಿಕ್ಕಿದ್ದನ್ನು ಎಸೆಯುವ ಒಂದು ವರ್ಷದ ಹೆಣ್ಣು ಮಗು ಯಾವ ವಸ್ತು ಬೀಳುವಾಗ ಸದ್ದು ಮಾಡುತ್ತದೆ ಮತ್ತು ಸದ್ದು ಮಾಡುವುದಿಲ್ಲ ಹಾಗೂ ಬೇರೆಬೇರೆ ಎತ್ತರದಿಂದ ಎಸೆದರೆ ಏನಾಗುತ್ತದೆ ಎಂಬುದನ್ನು ಕಲಿಯುತ್ತ ಹೋಗುತ್ತದೆ. ಜಗತ್ತು ಹೇಗೆ ನಡೆಯುತ್ತದೆ ಎಂಬುದನ್ನು ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರದಿಂದಲೇ ಕಲಿಯುತ್ತ ಹೋಗುತ್ತಾರೆ.

ಮಕ್ಕಳು ಹೇಗೆ ಕಲಿಯುತ್ತಾರೆ?

- ಅವಲೋಕನ– ಮನೆಯಲ್ಲಿ ತನ್ನ ತಾಯಿಯನ್ನು ಅನುಸರಿಸುವ ಆರು ವರ್ಷದ ಹುಡುಗಿ ‘ತಾಯಿಯಂತಾಗುವುದು ಹೇಗೆ’ ಎಂಬುದನ್ನು ಅತ್ಯಂತ ಆಸಕ್ತಿಯಿಂದ ಗಮನಿಸುತ್ತಾಳೆ. ಆಕೆ ಮನೆ–ಮನೆ ಆಟವಾಡುವಾಗ ಇದನ್ನು ಮರು–ಅಭಿನಯ ಮಾಡುವುದನ್ನು ಕಾಣಬಹುದಾಗಿದೆ.
- ಅನುಕರಣೆ– ತನ್ನ ಅಕ್ಕನನ್ನು ಅನುಕರಿಸುವ ಎರಡು ವರ್ಷದ ಮಗು ಭಾಷೆಯ ನಿಯಮಗಳನ್ನು ಹಾಗೂ ಉಲ್ಲಾಸದ ಮಿತಿಗಳನ್ನು ಕಲಿಯುತ್ತಿರುತ್ತದೆ.
- ಮೊದಲ ಅನುಭವಗಳು; ಸ್ವಂತ ವಿಚಾರಣೆಯ ಮೂಲಕ ಕಲಿಯುವುದು – ಸುತ್ತಿಗೆಯಿಂದ ಬಡಿದರೆ ತಾಯಿ ಏನು ಹೇಳಬಹುದು ಎಂಬುದಕ್ಕಾಗಿ ಐದು ವರ್ಷದ ಹುಡುಗ ಆಕೆಯನ್ನೇ ತದೇಕಚಿತ್ತದಿಂದ ನೋಡುತ್ತಿದ್ದಾನೆ. ಬೇರೆಬೇರೆ ಕಡೆ ಬಡಿದರೆ ಹೇಗೆ ಬೇರೆಬೇರೆ ಸದ್ದು ಬರುತ್ತದೆ ಎಂಬುದನ್ನೂ ಆತ ಕಲಿಯುತ್ತಿದ್ದಾನೆ.
- ಪ್ರಯೋಗ; ಮರು ಪ್ರಯತ್ನ – ಮಗ್‌ನಲ್ಲಿ ಮರಳನ್ನು ತುಂಬುವುದು ಮತ್ತು ಖಾಲಿ ಮಾಡುವ ಆಟ ಆಡುತ್ತಿರುವ ನಾಲ್ಕು ವರ್ಷದ ಬಾಲಕಿ ಖಾಲಿ ಮತ್ತು ಭರ್ತಿ ಮಾಡುವ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುತ್ತಿದ್ದಾಳೆ ಮತ್ತು ಈ ಸಂದರ್ಭದಲ್ಲಿ ತನ್ನ ಚಲನೆಯನ್ನು ಹೇಗೆ ನಡೆಸಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಿದ್ದಾಳೆ. ಕಲಿಕೆಯಲ್ಲಿ ಪರಿಸರದ ಪಾತ್ರ – ತಮ್ಮ ಜೀವನದಲ್ಲಿ ಬರುವ ಇತರ ವ್ಯಕ್ತಿಗಳಿಂದ ಮಕ್ಕಳು ಕಲಿಯುತ್ತಾರೆ; ಇಲ್ಲಿ ಹದಿಮೂರು ವರ್ಷ ವಯಸ್ಸಿನ ಇಬ್ಬರು ಮಕ್ಕಳು ಪರಸ್ಪರ ಒಬ್ಬರಿಗೊಬ್ಬರು ಗಮನಿಸುವ ಮತ್ತು ಕಲಿಯುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ.
- ಚಿಂತನಶೀಲ ವಿಚಾರಗಳು–ಮೇಲಿನ ಎಲ್ಲ ಉದಾಹರಣೆಗಳಲ್ಲಿ ಚಿಂತನಶೀಲ ವಿಚಾರಗಳು ಸಮಾನವಾಗಿವೆ. ಅದು ಹಾಗೆ ಕಾಣಿಸದೇ ಇದ್ದರೂ ಕೂಡ ಮಕ್ಕಳು ನಿರಂತರವಾಗಿ ತಮ್ಮ ಕಲಿಕೆಯ ಬಗೆಗೆ, ಕಾರಣಗಳು, ಪರಿಣಾಮಗಳ ಬಗೆಗೆ ಹಾಗೂ ತಮ್ಮ ಪರಿಸರದಲ್ಲಿರುವ ವಿಷಯಗಳ ಬಗೆಗೆ ಯೋಚನೆ ಮಾಡುತ್ತಲೇ ಇರುತ್ತಾರೆ.

ಶಾಲೆಗಳಲ್ಲಿ ಕಲಿಕೆ

ನಾವೆಲ್ಲರೂ ಕಲಿಯಬೇಕು ಎಂಬ ಉತ್ಕಟವಾದ ಬಯಕೆಯೊಂದಿಗೇ ಹುಟ್ಟಿದ್ದೇವೆ ಅನಿಸುತ್ತದೆ. ಹಾಗಾಗಿ ಕಲಿಕೆಯನ್ನು ಒಂದು ಕೆಲಸ ಎಂದು ಹೇಗೆ ಮತ್ತು ಯಾವಾಗ ಪರಿಗಣಿಸಲು ಸಾಧ್ಯ? ಈ ಹಿನ್ನೆಲೆಯಲ್ಲಿ ಕೆಲವು ಮಕ್ಕಳು ಕಲಿಕೆಯಲ್ಲಿ ಅಸಮರ್ಥರು ಎಂದು ನಾವಾದರೂ ಹೇಗೆ ಊಹಿಸುತ್ತೇವೆ?

ನೀವು ಈಜು ಕಲಿತದ್ದು ಅಥವಾ ಸೈಕಲ್ ತುಳಿಯಲು ಕಲಿತದ್ದನ್ನು ನೆನಪಿಸಿಕೊಳ್ಳಿ. ನಿಮಗೆ ಯಾರಾದರೂ ಅದರ ತಂತ್ರಗಳನ್ನು ಹೇಳಿಕೊಟ್ಟಿದ್ದಾರೆಯೇ? ಇದನ್ನು ನೀವು ಇನ್ನೊಬ್ಬರನ್ನು ನೋಡಿ ಕಲಿತಿದ್ದೇ? ಬಹಳಷ್ಟು ಕಾಲ ಪ್ರಯತ್ನಗಳನ್ನು ನಡೆಸಿ ನಿಮ್ಮದೇ ತಂತ್ರಗಳ ಮೂಲಕ ನೀರಿನಲ್ಲಿ ತೇಲುವುದನ್ನು ಅಥವಾ ಸೈಕಲ್ ಬ್ಯಾಲೆನ್ಸ್ ಮಾಡುವುದನ್ನು ಕಲಿತಿರಾ?

ನಮಗೆಲ್ಲರಿಗೂ ಕಲಿಯುವ ಸಾಮರ್ಥ್ಯವಿದೆ. ಆದರೆ ನಾವು ಕಲಿಯುವ ದಾರಿಗಳೇ ಭಿನ್ನ ಭಿನ್ನವಾಗಿರುತ್ತವೆ. ಕೆಲವು ರೀತಿಯ ಕಲಿಕಾ ಕ್ರಮಗಳನ್ನು ನಾವೇ ಸ್ವಾಭಾವಿಕವಾಗಿ ರೂಢಿಸಿಕೊಳ್ಳುತ್ತೇವೆ ಮತ್ತು ನಮಗೆ ನಮ್ಮದೇ ಆದ ಒಂದು ಗತಿ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಉಳಿದವರು ಮಾಡುವುದನ್ನು ನೋಡುತ್ತಲೇ ನಾವು ನಮ್ಮದೇ ದಾರಿಯನ್ನು ಕಂಡುಕೊಳ್ಳುತ್ತೇವೆ. ಈಗ ನಾವು ಒಂದು ತರಗತಿಯನ್ನೇ ಉದಾಹರಣೆಯಾಗಿ ತೆಗೆದುಕೊಳ್ಳೋಣ. ಭಿನ್ನರಾಶಿಗಳಿಗೆ ಸಂಬಂಧಿಸಿದ ಅಧ್ಯಾಯವನ್ನು ಪಾಠ ಮಾಡುವ ಸಂದರ್ಭದಲ್ಲಿ ಕೆಲವು ಮಕ್ಕಳು ತಕ್ಷಣ ಅರ್ಥ ಮಾಡಿಕೊಂಡಂತೆ ಕಂಡುಬಂದರೆ, ಉಳಿದವರಿಗೆ ಅದು ತಕ್ಷಣಕ್ಕೆ ಅರ್ಥವಾಗಿರುವುದಿಲ್ಲ. ಸಮಸ್ಯೆಯನ್ನು ಪರಿಹರಿಸುವಲ್ಲಿ ಇರುವ ದೈಹಿಕ ಅಡೆತಡೆಗಳಿಂದ ಕೆಲವು ಮಕ್ಕಳು ಲಾಭ ಮಾಡಿಕೊಂಡರೆ ಉಳಿದವರು ಸಮಸ್ಯೆಯನ್ನು ಓದಿದ ತಕ್ಷಣ ಪರಿಹರಿಸುವುದಕ್ಕೆ ಆದ್ಯತೆ ನೀಡುತ್ತಾರೆ. ಒಟ್ಟು ಪ್ರಕ್ರಿಯೆಗೆ ಬದಲಾಗಿ ಕೇವಲ ಫಲಿತಾಂಶದ ಆಧಾರದಲ್ಲಿ ನಮ್ಮ ಕಲಿಕೆಯನ್ನು ಅಳೆಯಲು ಶುರುಮಾಡಿದಾಗ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಮಗುವು ಒಂದು ಲೆಕ್ಕವನ್ನು ಪರಿಹರಿಸಲು ಸಾಧ್ಯವೇ ಅಥವಾ ಇಲ್ಲವೇ ಎನ್ನುವುದರ ಆಧಾರದಲ್ಲಿ ನಾವು ಯಶಸ್ಸು ಹಾಗೂ ಸೋಲನ್ನು ಅಳೆಯಲು ಹೊರಟಾಗ ಇತರ ಪ್ರಮುಖ ಪ್ರಕ್ರಿಯೆಗಳನ್ನು ಮರೆತುಬಿಡುತ್ತೇವೆ;

- ಕೆಲವು ಮಕ್ಕಳು ಕಲಿಯುವ ಸಾಮರ್ಥ್ಯ ಹೊಂದಿದ್ದರೆ ಉಳಿದ ಮಕ್ಕಳಿಗೆ ಆ ಸಾಮರ್ಥ್ಯವಿಲ್ಲ ಎಂದು ನಾವು ನಂಬುವುದಕ್ಕೆ ಆರಂಭಿಸುತ್ತೇವೆ. ಕೆಲವು ಸಂದರ್ಭಗಳಲ್ಲಿ ನಾವು ಇದಕ್ಕೆ ಕಾರಣಗಳನ್ನೂ ಕೊಟ್ಟುಕೊಳ್ಳುತ್ತೇವೆ; ಮಗು ತುಂಬಾ ಚೂಟಿ, ಮನೆಯಲ್ಲಿ ಆತನಿಗೆ ಉತ್ತಮ ವಾತಾವರಣವಿಲ್ಲ, ಆತ ಬುದ್ಧಿವಂತನಲ್ಲ ಅಥವಾ ಕಲಿಕೆಯಲ್ಲಿ ಆತನಿಗೆ ಏಕಾಗ್ರತೆಯ ಕೊರತೆ ಇದೆ... ಹೀಗೆ ಕಾರಣಗಳನ್ನು ಕೊಡುತ್ತೇವೆ.
- ಬೇರೆಬೇರೆ ಮಕ್ಕಳು ಬೇರೆಬೇರೆ ಗತಿಗಳಲ್ಲಿ ಕಲಿಕೆಯನ್ನು ಕರಗತ ಮಾಡಿಕೊಳ್ಳುತ್ತಾರೆ ಎಂಬ ಸಂಗತಿಯನ್ನು ನಾವು ಅರ್ಥ ಮಾಡಿಕೊಳ್ಳಲು ಮರೆಯಬಹುದು.
- ನಮ್ಮ ಮನಸ್ಸು ಕೇವಲ ಫಲಿತಾಂಶದ ಮೇಲೆಯೇ ಕೇಂದ್ರೀಕೃತಗೊಂಡಾಗ, ಮಗುವು ಅರ್ಥ ಮಾಡಿಕೊಳ್ಳಲೇ-ಬೇಕಾದ ವಿಷಯದ ಭಾಗಗಳ ಬಗೆಗೆ ಗಮನ ನೀಡುವುದನ್ನು ನಾವು ಮರೆತುಬಿಡಬಹುದು. ಉದಾಹರಣೆಗೆ, ಮಗುವು ಭಿನ್ನರಾಶಿಗಳನ್ನು ತನ್ನ ದಿನನಿತ್ಯದ ಮಾತುಕತೆ ಮೂಲಕವೇ ತಿಳಿದುಕೊಳ್ಳುವುದನ್ನು ಗಮನಿಸಿ–ನನಗೆ ಅರ್ಧ ಚಾಕಲೇಟನ್ನು ಕೊಡು, ಈ ಚಾಕಲೇಟನ್ನು ನೀವು ಮೂವರು ಸಮನಾಗಿ ಹಂಚಿಕೊಳ್ಳಿ,'–ಆದರೆ ಇದೇ ಸಮಸ್ಯೆಯನ್ನು ಸಂಖ್ಯೆಗಳಲ್ಲಿ ಅರ್ಥ ಮಾಡಿಕೊಳ್ಳಲು ಅಸಮರ್ಥವಾಗುತ್ತದೆ. ಮಗುವು ಏನನ್ನು ಅರ್ಥ ಮಾಡಿಕೊಳ್ಳುತ್ತದೆ ಮತ್ತು ಆ ಮಗು ಎಲ್ಲಿ ಸಿಕ್ಕಿಹಾಕಿಕೊಂಡಿದೆ ಎಂಬುವುದನ್ನು ನಾವು ಅರ್ಥ ಮಾಡಿ-ಕೊಳ್ಳಲು ಸಾಧ್ಯವಾದರೆ ಇಂತಹುದೊಂದು ಅವಲೋಕನವು ತರಗತಿಯಲ್ಲಿ ಸಹಾಯಕವಾಗಬಹುದು ಮತ್ತು ಇದು ನಮ್ಮ ಬೋಧನೆಯ ಶೈಲಿ ಮತ್ತು ಒಟ್ಟು ವಿಷಯವನ್ನು ಬದಲಿಸಬಲ್ಲದು.

ತರಗತಿಯಲ್ಲಿನ ಕಲಿಕೆ

ಒಂದು ತರಗತಿಯಲ್ಲಿ ಅನೇಕ ಮಂದಿ ಮಕ್ಕಳಿರುವಾಗ ಒಬ್ಬ ಶಿಕ್ಷಕ ಪ್ರತಿಯೊಬ್ಬ ವಿದ್ಯಾರ್ಥಿಯ ಕಲಿಕೆಯ ವೇಗವನ್ನು ಹೇಗೆ ಅರ್ಥ ಮಾಡಿಕೊಳ್ಳಲು ಸಾಧ್ಯ? ಇದರ ಜೊತೆಗೇ ಫಲಿತಾಂಶಗಳನ್ನು ಅಳೆಯಲು ಅಗತ್ಯವಿರುವ ಮೌಲ್ಯಮಾಪನವನ್ನೂ ಶಿಕ್ಷಕರು ಮಾಡಬೇಕು ಎಂಬುದು ಶಾಲೆಯ ಬಯಕೆಯಾಗಿರುತ್ತದೆ. ಇಂತಹ ಮಾಹಿತಿಯನ್ನು ತರಗತಿಯಲ್ಲಿ ಹೇಗೆ ಬಳಸಲು ಸಾಧ್ಯ? ಈ ಕಲಿಕೆಯನ್ನು ತರಗತಿ ಕೊಠಡಿಗಳಲ್ಲಿ ಹೇಗೆ ನಡೆಸಬಹುದು ಎಂಬುದಕ್ಕೆ ಈ ಕೆಳಗಿನ ಕೆಲವು ಉದಾಹರಣೆಗಳನ್ನು ನೋಡ-ಬಹುದು:

ಒಬ್ಬರ ಸ್ವಂತ ನಂಬಿಕೆಯನ್ನು ಬದಲಿಸುವುದು:

ಮಕ್ಕಳು ಸದಾ ಎಚ್ಚರಿಕೆಯಿಂದ ಗಮನಿಸುತ್ತಿರುತ್ತಾರೆ ಮತ್ತು ಅವರು ಪದರಹಿತವಾದ ಸಂಕೇತಗಳನ್ನು ದೊಡ್ಡವರಿಗಿಂತ ಹೆಚ್ಚು ದಕ್ಷತೆಯಿಂದ ಅರ್ಥ ಮಾಡಿಕೊಳ್ಳುತ್ತಾರೆ. 'ನಾನೊಬ್ಬ ದಡ್ಡ' ಎಂಬುದನ್ನು ಮಾತುಗಳಲ್ಲಿ ಹೇಳದೇ ಹೋದರೂ ಶಿಕ್ಷಕರು ಹೀಗೇ ಯೋಚನೆ ಮಾಡುತ್ತಿದ್ದಾರೆ ಎಂಬುದನ್ನು ಅವರು ಗ್ರಹಿಸಬಲ್ಲರು. ಇದು ಮಗುವಿನ ಸ್ವಾಭಿಮಾನವನ್ನು ತಗ್ಗಿಸುವ ಮೂಲಕ ಆತ/ಆಕೆಯ ಕಲಿಕೆಗೆ ಅಡ್ಡಿಯುಂಟು ಮಾಡಬಹುದು. ಇದರಿಂದ ಮಗುವು, 'ನನ್ನಿಂದ ಇದನ್ನು ಮಾಡಲು ಸಾಧ್ಯವಿಲ್ಲ, ನಾನು ಅಷ್ಟು ಚುರುಕಾಗಿಲ್ಲ' ಎಂದು ನಂಬಲು ಆರಂಭಿಸುತ್ತದೆ. ಕೆಲವೊಮ್ಮೆ ಇಂತಹ ನಂಬಿಕೆಗಳೇ ಮಗು ತುಂಟತನದಿಂದ ವರ್ತಿಸಲು ಕಾರಣವಾಗುತ್ತದೆ. ತರಗತಿಯಲ್ಲಿ ಉತ್ತಮ ನಿರ್ವಹಣೆ ತೋರಲು ಸಾಧ್ಯವಿಲ್ಲ ಎಂಬ ಹತಾಶೆಯೇ ಇದಕ್ಕೆಲ್ಲ ಮೂಲವಾಗುತ್ತದೆ ಅಥವಾ 'ನಾನು ಉತ್ತಮ ಕಲಿಕೆಯಿಂದ ಹೆಸರು ಪಡೆಯಲು ಸಾಧ್ಯವಿಲ್ಲ, ಹಾಗಾಗಿ ಎಲ್ಲರಿಗೆ ತೊಂದರೆ ಕೊಟ್ಟು ಹೆಸರು ಮಾಡೋಣ' ಎಂಬ ನಂಬಿಕೆಯನ್ನು ಮಗುವು ಬೆಳೆಸಿಕೊಳ್ಳಬಹುದು. ಮಗುವಿನ ಸಾಮರ್ಥ್ಯಗಳ ಬಗ್ಗೆ ಶಿಕ್ಷಕನಾದವನು ಇಡುವ ನಂಬಿಕೆ ಮಗುವಿನ ಮೇಲೆ ಗಂಭೀರವಾದ ಪರಿಣಾಮವನ್ನೇ ಬೀರಲಿದೆ. 'ನನ್ನಿಂದ ಇದನ್ನು ಮಾಡಲು ಸಾಧ್ಯವಿದೆ ಎಂದು ಶಿಕ್ಷಕರು ಭಾವಿಸಿದ್ದಾರೆ' ಎಂಬ ಸಂಗತಿಯನ್ನು ಗ್ರಹಿಸುವ ಸಾಮರ್ಥ್ಯವನ್ನು ಮಗುವು ಹೊಂದಿರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರತಿಯೊಂದು ಮಗುವಿಗೂ ಕಲಿಯುವ ಸಾಮರ್ಥ್ಯವಿದೆ ಎಂದು ಶಿಕ್ಷಕರು ನಂಬಿದಾಗ ಆತ/ಆಕೆಯ ನಡವಳಿಕೆಯಲ್ಲಿ ಸ್ವಾಭಾವಿಕವಾಗಿಯೇ ಬದಲಾವಣೆ ಬರಲು ಸಾಧ್ಯವಾಗುತ್ತದೆ. ಇಂತಹ ಒಂದು ಬದಲಾವಣೆಯೇ ಮಕ್ಕಳಿಗೆ ಆರಾಮದಾಯಕ ಹಾಗೂ ಉತ್ತೇಜನಕಾರಿ ವಾತಾವರಣವನ್ನು ಸೃಷ್ಟಿಸಲಿದೆ. ಈಗ ಈ ಕೆಳಗಿನ ಉದಾಹರಣೆಗಳನ್ನೇ ನೋಡೋಣ:

ಇದು ರಾಯಪುರದ ಸರಕಾರಿ ಪ್ರಾಥಮಿಕ ಶಾಲಾ ಶಿಕ್ಷಕಿಯ ಅನುಭವವಾಗಿದೆ. ಪ್ರಾಥಮಿಕ ಶಾಲಾ ಮಕ್ಕಳಿಗೆ ಪಾಠ ಮಾಡುವ ಶ್ರೀಮತಿ ಗಾಯತ್ರಿಯವರಿಗೆ, 'ಈ ಮಕ್ಕಳು ಸಾಕಷ್ಟು ಬುದ್ಧಿವಂತರಲ್ಲ' ಎಂದು ಕೆಲವೊಮ್ಮೆ ಅನಿಸಿತ್ತು. ಒಂದು ಮತ್ತು ಎರಡನೇ ತರಗತಿಯಲ್ಲಿಯೂ ವಿದ್ಯಾರ್ಥಿಗಳ ಓದುವ ಮತ್ತು ಬರೆಯುವ ಸಾಮರ್ಥ್ಯ ಕಳಪೆ ಮಟ್ಟದ್ದಾಗಿತ್ತು. ಇದು ಅವರ ಉತ್ಸಾಹವನ್ನು ಕುಂದಿಸಲು ಕಾರಣವಾಗಿತ್ತು ಮತ್ತು ಕೆಲವು ಬಾರಿ ಮಕ್ಕಳ ಮೇಲೆ ಕೋಪಗೊಳ್ಳುವಂತೆ ಮಾಡಿತ್ತು. ಎಳೆಯ ಮಕ್ಕಳಿಗೆ ಹೇಗೆ ಬೋಧನೆ ಮಾಡಬೇಕು ಎಂಬ ತರಬೇತಿ ಕಾರ್ಯಕ್ರಮದಲ್ಲಿ ಭಾಗಿಯಾದ ಆಕೆಯ ಮೇಲೆ ಅದು ಯಾವ ರೀತಿ ಪರಿಣಾಮ ಬೀರಿತು ಎಂಬುದರ ವರದಿ ಇಲ್ಲಿದೆ;

‘ಮಕ್ಕಳು ಹೇಗೆ ಕಲಿಯುತ್ತಾರೆ ಮತ್ತು ಅವರ ಸಾಮರ್ಥ್ಯ ಏನು ಎನ್ನುವ ವಿಚಾರಕ್ಕೆ ಸಂಬಂಧಿಸಿದಂತೆ ಶ್ರೀಮತಿ ಗಾಯತ್ರಿ ಅವರ ಬೋಧನೆಯಲ್ಲಿ ಬಹುಮುಖ್ಯ ಬದಲಾವಣೆ ಕಂಡುಬಂದಿತು. ಮಕ್ಕಳು ತಾವಾಗಿಯೇ ಕಲಿಯುತ್ತಾರೆ ಎಂಬುದನ್ನು ಅರಿತುಕೊಂಡ ಬಳಿಕ ಹೆಚ್ಚಿನ ಪರಿಶೋಧನೆ ಟಿಎಲ್‌ಎಂಗಳು (ಬೋಧನಾ ಕಲಿಕಾ ಸಾಮಗ್ರಿಗಳು) ಮತ್ತು ಕಲಿಕಾ ಸಾಮಗ್ರಿಗಳನ್ನು ಬಳಕೆ ಮಾಡುವ ಉದ್ದೇಶದಲ್ಲಿ ಅರ್ಥವಿದೆ ಎಂಬುದು ಆಕೆಗೆ ಅರಿವಾಯಿತು. ಮಕ್ಕಳಲ್ಲಿ ನಿಸರ್ಗದತ್ತವಾಗಿ ಇರುವ ಕುತೂಹಲವನ್ನು ತಣಿಸುವಲ್ಲಿ ಈ ಜ್ಞಾನವನ್ನೂ ಆಕೆ ಬಳಸಿಕೊಳ್ಳಬಹುದಾಗಿದೆ; ಮಕ್ಕಳ ಗಮನವನ್ನು ಸೆಳೆಯುವಲ್ಲಿಯೂ ಈ ಸಾಧನ ಹೆಚ್ಚು ಪ್ರಯೋಜನಕಾರಿಯಾಗಿದೆ. ವಿದ್ಯಾರ್ಥಿಗಳನ್ನು ಶಿಕ್ಷೆಗೆ ಒಳಪಡಿಸುವುದು ಮತ್ತು ನಿಂದಿಸುವುದಕ್ಕೆ ಸೀಮಿತವಾಗಿದ್ದ ಆಕೆಯ ಬೋಧನೆಯು ಅವರೊಂದಿಗೆ ಸರಳ ಸಂಭಾಷಣೆಯಲ್ಲಿ ತೊಡಗುವ ಕ್ರಿಯೆಯಾಗಿ ಬದಲಾಯಿತು. ಈ ಬದಲಾವಣೆ ಏಕಾಏಕಿ ಆಗಿರುವಂತಹುದ್ದಲ್ಲ, ಕಾಲಕ್ರಮೇಣ ಆಗಿರುವುದು. ಆದರೆ ಈ ಪ್ರಕ್ರಿಯೆಗೆ ಆಕೆ ನಿಜಕ್ಕೂ ಆಭಾರಿಯಾಗಿದ್ದಾರೆ’.

ಶ್ರೀಮತಿ ಗಾಯತ್ರಿ ಅವರು ಈ ಬೋಧನಾ ವಿಧಾನವನ್ನು ಅಳವಡಿಸಿಕೊಂಡ ಬಳಿಕ ಮಕ್ಕಳ ಕಲಿಕೆ ಮತ್ತು ಕಲಿಕಾ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಮಟ್ಟದಲ್ಲಿಯೂ ತಕ್ಷಣ ಸಾಕಷ್ಟು ಬದಲಾವಣೆ ಕಂಡುಬಂದಿತು. ಕ್ರಮೇಣ ಒಂದನೇ ತರಗತಿಯಲ್ಲಿರುವ ಮಕ್ಕಳ ಓದುವ ಮತ್ತು ತರಗತಿಯಲ್ಲಿ ಅವರು ಪರಸ್ಪರ ಬೆರೆಯುವ ಪ್ರಮಾಣವೂ ಹೆಚ್ಚಾಯಿತು ಮತ್ತು ಅವರು ಹಿಂದಿಗಿಂತ ಹೆಚ್ಚು ಅರ್ಥ ಮಾಡಿಕೊಂಡಿರುವುದು ಗಮನಕ್ಕೆ ಬಂದಿತು. ತಮಗೂ ತರಗತಿಗಳಲ್ಲಿ ಪಾಠ ಮಾಡುವುದು ಹೆಚ್ಚು ಖುಷಿ ಕೊಡಲು ಆರಂಭವಾಯಿತು ಎಂದು ಆಕೆ ಅಭಿಪ್ರಾಯಪಟ್ಟಿದ್ದಾರೆ. ಇದರ ಜೊತೆಗೇ ಶಾಲೆಯಲ್ಲಿರುವ ಇತರ ಶಿಕ್ಷಕರು ಮತ್ತು ಉಳಿದ ಶಾಲೆಗಳ ಕೆಲವು ಶಿಕ್ಷಕರು ಇದೇ ಬೋಧನಾ ವಿಧಾನವನ್ನು ಅಳವಡಿಸಿಕೊಳ್ಳುವ ಅಪೇಕ್ಷೆ ವ್ಯಕ್ತಪಡಿಸಿದರು.[i] ಮಕ್ಕಳು ಹೇಗೆ ಕಲಿಯುತ್ತಾರೆ, ಹೇಗೆ ಬದಲಾವಣೆ ಹೊಂದುತ್ತಾರೆ ಎನ್ನುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ ಸಂದರ್ಭದಲ್ಲಿ, ಒಬ್ಬರು ಹೇಗೆ ಬೋಧನೆ ಮಾಡುತ್ತಾರೆ ಎಂಬ ಪ್ರಶ್ನೆ ಬಂದಾಗ ಸ್ವಾಭಾವಿಕವಾಗಿ ಬದಲಾವಣೆ ಕಂಡುಬರಬಹುದು. ಉದಾಹರಣೆಗೆ, ಮಕ್ಕಳು ಎಲ್ಲವನ್ನೂ ಬರೆಯುವಾಗ ಮಾತ್ರ ಕಲಿಯುತ್ತಾರೆ ಎಂದು ರಾಧಾ ನಂಬಿಕೊಂಡಿದ್ದರೆ ಅವರು ತರಗತಿಯಲ್ಲಿ ಬರೆಯುವ ಕೆಲಸಕ್ಕೇ ಹೆಚ್ಚಿನ ಆದ್ಯತೆ ನೀಡುತ್ತಾರೆ. ಆದರೆ ಮಕ್ಕಳು ಪರಿಶೋಧನೆ ಮಾಡುವ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರಿಂದ ಹೆಚ್ಚು ಕಲಿಯುತ್ತಾ ಹೋಗುತ್ತಾರೆ ಎಂಬ ಬಗ್ಗೆ ಆಕೆಗೆ ನಂಬಿಕೆ ಇದ್ದರೆ, ಅವರು ತರಗತಿಯಲ್ಲಿ ಹೆಚ್ಚು ಹೆಚ್ಚು ಒಗಟುಗಳು, ಪ್ರಯೋಗಗಳು ಮತ್ತು ವಿನೋದದಂತಹ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು.

ಅಧ್ಯಾಪನ ಶೈಲಿಯಲ್ಲಿ ಬದಲಾವಣೆ

ಕೆಲವು ಸಂದರ್ಭಗಳಲ್ಲಿ ಮಗುವು ಕಲಿಕೆಯಲ್ಲಿ ವಿಫಲವಾದರೆ, ಆಕೆ/ಆತನಿಗೆ ಕಲಿಯುವ ಸಾಮರ್ಥ್ಯ ಇಲ್ಲವೇ ಇಲ್ಲ ಎಂದಲ್ಲ, ಬದಲಾಗಿ ಬೋಧನೆಯ ವಿಧಾನ ಮಗುವಿಗೆ ಆಪ್ತವಾಗುತ್ತಿಲ್ಲ ಎಂದು ಅರ್ಥ. ಹಾಗಾಗಿ ಒಬ್ಬರ ಬೋಧನಾ ವಿಧಾನವನ್ನು ಬದಲಿಸಿಕೊಳ್ಳುವುದರಿಂದ ಮತ್ತು ಮಗುವಿನ ಮಟ್ಟಕ್ಕೆ ಇಳಿದು ಬೋಧನೆ ಮಾಡುವುದರಿಂದ ಆ ಮಗುವು ಜಡತ್ವವನ್ನು ಕಳಚಿಕೊಳ್ಳಲು ಸಾಧ್ಯವಾಗುತ್ತದೆ. ಈ ಕೆಳಗಿನ ಉದಾಹರಣೆಗಳು ಇದಕ್ಕೆ ಮಾದರಿಯಾಗಿವೆ:

ಇದು ಆಟಿಸಂ (ತಂತನತೆ) ಸಮಸ್ಯೆ ಇರುವ ಮೂರು ವರ್ಷ ವಯಸ್ಸಿನ ಮಗುವಿಗೆ ಸಂಬಂಧಿಸಿದ ವರದಿ. ಆತ ಯಾರೊಂದಿಗೂ ಮಾತನಾಡುತ್ತಿರಲಿಲ್ಲ, ಯಾವುದರೆಡೆಗೂ ಗಮನ ನೀಡುತ್ತಿರಲಿಲ್ಲ ಅಥವಾ ಯಾರ ಪ್ರಭಾವಕ್ಕೂ ಒಳಗಾಗುತ್ತಿರಲಿಲ್ಲ. ಆತನನ್ನು ವಿಶೇಷ ಅಗತ್ಯಗಳಿರುವ ಮಕ್ಕಳ ಶಾಲೆಗೆ ಕರೆತರಲಾಯಿತು; ಮೂರು ತಿಂಗಳ ಕಾಲ ಶಿಕ್ಷಕರ ಜೊತೆ ನಡೆದ ನೇರಾನೇರ ಕಲಾಪಗಳ ಬಗೆಗೆ ಆತನ ಅನುಭವದ ವರದಿ ಇಲ್ಲಿದೆ.

ಪಾರ್ಥ ಯಾವುದನ್ನೂ ಅಥವಾ ಯಾರಿಂದಲೂ ಕಲಿಯಲು ಉತ್ಸಾಹವಾಗಲಿ ಅಥವಾ ಆಸಕ್ತಿಯಾಗಲಿ ತೋರಿಸುತ್ತಿರಲಿಲ್ಲ. ಆತನನ್ನು ಶಾಲೆಗೆ ಕರೆತಂದಾಗಲೂ ಅವನು ಶಿಕ್ಷಕರ ಮುಂದೆ ಕುಳಿತುಕೊಳ್ಳಲು ನಿರಾಕರಿಸುತ್ತಿದ್ದ. ಒಂದು ಮೂಲೆಯಲ್ಲಿ ನೆಲದ ಮೇಲೆ ಕುಳಿತು ತನ್ನಷ್ಟಕ್ಕೆ ತಾನು ಇದ್ದು ಬಿಡುತ್ತಿದ್ದ. ಆತ ತಕ್ಕಮಟ್ಟಿಗೆ ಆಸಕ್ತಿ ತೋರಿಸುತ್ತಿದ್ದ ಒಂದೇ ಒಂದು ವಿಷಯವೆಂದರೆ ಅದು ಸೂಪರ್‌ಹೀರೋ ಕಾಮಿಕ್ಸ್‌ನಲ್ಲಿ ಮಾತ್ರ. ಓದುವುದು ಹೇಗೆ ಎಂದು ಅವನಿಗೆ ಗೊತ್ತಿಲ್ಲದೇ ಇದ್ದರೂ ಕೂಡ ಮನೆಯಲ್ಲಿ ಕೆಲವು ಕಾಮಿಕ್ಸ್ ಪುಸ್ತಕಗಳನ್ನು ತಿರುವಿ ಹಾಕುತ್ತಿದ್ದ.

ಕೆಲವು ವಾರಗಳ ಕಾಲ ಪಾರ್ಥನ ಗಮನವನ್ನು ಸೆಳೆಯಲು ಮಾಡಿದ ಪ್ರಯತ್ನಗಳೆಲ್ಲ ವಿಫಲವಾದ ಬಳಿಕ, ಶಿಕ್ಷಕರು ತರಗತಿಯಲ್ಲಿ ಆತನ ಕಾಮಿಕ್ಸ್ ಆಸಕ್ತಿಯನ್ನು ಬಳಸಿಕೊಳ್ಳಲು ನಿರ್ಧರಿಸಿದರು. ತನ್ನ ಮುಂದೆ ಬಂದು ಕುಳಿತುಕೋ ಎಂದು ಶಿಕ್ಷಕರು ಪಾರ್ಥನಿಗೆ ಎಂದೂ ಬಲವಂತ ಮಾಡಲಿಲ್ಲ; ಬದಲಾಗಿ ಶಿಕ್ಷಕರೇ ಆತನ ಬಳಿ ಹೋಗಿ ಕುಳಿತು ಕಾಮಿಕ್ ಚಿತ್ರಗಳನ್ನು ಬರೆದರು. ಕಾಮಿಕ್‌ನ ಒಂದು ಸಾಲನ್ನು ಮುಗಿಸಿದ ಶಿಕ್ಷಕರು ಆ ಪೇಪರನ್ನು ಪಾರ್ಥನ ಬಳಿಯಲ್ಲೇ ಬಿಟ್ಟು ತನ್ನ ಸೀಟಿಗೆ ಮರಳಿ ಚಿತ್ರ ಬಿಡಿಸುವುದನ್ನು ಮುಂದುವರಿಸಿದರು. ಇದು ಪಾರ್ಥನಿಗೆ ಚಿತ್ರ ಬಿಡಿಸಲು ಸಿಕ್ಕ ಭಯರಹಿತ ಆಹ್ವಾನವಾಗಿತ್ತು. ಹೀಗೆ ಎರಡು ತಿಂಗಳುಗಳು ಕಳೆದವು. ಕ್ರಮೇಣ ಪಾರ್ಥ ಭಯವನ್ನು ಬಿಟ್ಟು ಶಿಕ್ಷಕರ ಮುಂದೆಯೇ ಬಂದು ಕುಳಿತುಕೊಳ್ಳಲು ಆರಂಭಿಸಿದ. ಶಿಕ್ಷಕರು ಚಿತ್ರಗಳನ್ನು ಬರೆಯುವಾಗ ಪಾರ್ಥ ಮೌನದಿಂದ ಎಲ್ಲವನ್ನೂ ಗಮನಿಸುತ್ತಿದ್ದ; ಕ್ರಮೇಣ ಚಿತ್ರದ ಕಡೆಗೆ ಕೈ ತೋರಿಸಿ ಸದ್ದು ಮಾಡಲು ಶುರುಮಾಡಿದ. ಶಿಕ್ಷಕರು ಆತನ ಆಸಕ್ತಿಯನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದರು. ತಾನು ಸುರಕ್ಷಿತ ಎಂಬ ಭಾವನೆ ಅವನಲ್ಲಿ ಉಂಟಾಗಿದ್ದರಿಂದ ತಾನಾಗಿಯೇ ಮಾತನಾಡಲು ಆಸಕ್ತಿ ವಹಿಸಿದ. ಇದು ಆರಂಭ. ಇದಾದ ಬಳಿಕ ಶಿಕ್ಷಕರು ಕ್ರಮೇಣ ಆತನೊಂದಿಗೆ ಬೆರೆಯುವುದನ್ನು ಹೆಚ್ಚಿಸಿ ಆತನನ್ನು ನಾನಾ ವಿಧಾನಗಳಲ್ಲಿ ತೊಡಗಿಸಿಕೊಳ್ಳಲು ಯಶಸ್ವಿಯಾದರು.

ಕಲಿಕೆಯಲ್ಲಿ ಅಸಮರ್ಥ ಎಂದು ಎಲ್ಲರಿಂದ ಅನಿಸಿಕೊಂಡ, ಯಾವುದರಲ್ಲಿಯೂ ಆಸಕ್ತಿಯೇ ಇಲ್ಲದ ಹುಡುಗ ಈಗ ಸುಮಾರು ಎಂಟು ವರ್ಷ ವಯಸ್ಸನ್ನು ತಲುಪಿದ್ದು ಸ್ನೇಹಿತರೊಂದಿಗೆ ಆಟವಾಡಲು ಆಸಕ್ತಿ ತೋರುತ್ತಿದ್ದಾನೆ ಮತ್ತು ತನ್ನ ಸುತ್ತಲಿನ ಪರಿಸರದ ಬಗೆಗೆ ಕುತೂಹಲ ಬೆಳೆಸಿಕೊಂಡಿದ್ದಾನೆ. ಇದರಿಂದ ನೆನಪಿಟ್ಟುಕೊಳ್ಳಬೇಕಾದ ಬಹುಮುಖ್ಯ ಅಂಶ ಏನೆಂದರೆ ಮಗುವು ಈಗಿರುವ ವಿಧಾನದಲ್ಲಿ ಕಲಿಯಲು ವಿಫಲವಾಗಿದೆ ಎಂದ ಮಾತ್ರಕ್ಕೆ ಅದು ಕಲಿಕೆಯಲ್ಲಿಯೇ ವಿಫಲವಾಗಿದೆ ಎಂಬ ತೀರ್ಮಾನಕ್ಕೆ ಬಂದುಬಿಡಬಾರದು.

ಆಸಕ್ತಿ ಹುಟ್ಟಿಸುವುದು ಮತ್ತು ಕುತೂಹಲ ಕಾಯ್ದುಕೊಳ್ಳುವುದು

ಮಗುವಿನ ಕೊನೆಯಿರದ ಪ್ರಶ್ನೆಗಳ ಸುರಿಮಳೆಯಿಂದ ನೀವು ಬಸವಳಿದು ಹೋಗಿದ್ದರೆ ಮಗುವು ಕಲಿಕೆಯಲ್ಲಿ ಅತೀವ

ಆಸಕ್ತಿಯನ್ನು ಹೊಂದಿದೆ ಎಂಬುದು ನಿಮಗೆ ಅರಿವಾಗಬೇಕು. ಮಕ್ಕಳು ಕುತೂಹಲದ ಮನೋಭಾವವನ್ನು ಬೆಳೆಸಿಕೊಳ್ಳುತ್ತಿದ್ದಾರೆ ಮತ್ತು ಎಲ್ಲವನ್ನೂ ಗಮನಿಸುತ್ತಿದ್ದಾರೆ. ಕೆಲವೊಮ್ಮೆ ತರಗತಿ ಕೊಠಡಿಯ ಕಲಿಕಾ ವಾತಾವರಣವು ಮಕ್ಕಳ ಕಲಿಯುವ ಸ್ವಾಭಾವಿಕ ಬಯಕೆಗೇ ಅಡ್ಡಿಯಾಗುವ ಸಾಧ್ಯತೆ ಇರುತ್ತದೆ. ತರಗತಿಯಲ್ಲಿ ಮಕ್ಕಳು ವಿಫಲರಾಗುವುದಕ್ಕೆ ಬಹುಮುಖ್ಯ ಕಾರಣಗಳಲ್ಲಿ ಒಂದೇನೆಂದರೆ ಮಕ್ಕಳಿಗೆ ಕ್ಲಾಸ್‌ರೂಮ್ ಬೋರ್ ಹೊಡೆದಿರುತ್ತದೆ ಎಂದು ಜಾನ್ ಹೋಲ್ಟ್ ತಮ್ಮ 'ಹೌ ಚಿಲ್ಡ್ರನ್ ಫೇಲ್' (ಮಕ್ಕಳು ಹೇಗೆ ನಪಾಸಾಗುತ್ತಾರೆ) ಎಂಬ ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ. ಶಾಲೆಗಳಲ್ಲಿ ಬೇಸರ ಹುಟ್ಟಿಸುವಂತಹ ಪದೇಪದೇ ಪುನರಾವರ್ತನೆಗೊಳ್ಳುವ ಕೆಲವು ಕೆಲಸಗಳಿಂದ ಮಕ್ಕಳಲ್ಲಿ ಅಗಾಧವಾಗಿರುವ ಸಾಮರ್ಥ್ಯಗಳನ್ನು ವ್ಯಾಪಕವಾಗಿ ಬಳಸಿಕೊಳ್ಳಲು ಸಾಧ್ಯವಿಲ್ಲ. ಹಾಗಾಗಿ ಮಕ್ಕಳು ಬಹುಬೇಗ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ ಮತ್ತು ವಿಷಯದಲ್ಲಿ ಅವರು ತಮ್ಮನ್ನು ತೊಡಗಿಸಿಕೊಳ್ಳುವುದಿಲ್ಲ. (ಹೋಲ್ಟ್ ಮತ್ತು ಫ್ರಾಮ್ಮೆ–1964). ಇದನ್ನೇ ನಾವು ಕೆಲವೊಮ್ಮೆ 'ಈ ಮಗುವು ಕಲಿಯಲು ಅಸಮರ್ಥ' ಎಂದು ವ್ಯಾಖ್ಯಾನಿಸಿಬಿಡುತ್ತೇವೆ.

ಹಾಗಾದರೆ ಮಕ್ಕಳಲ್ಲಿ ಸ್ವಾಭಾವಿಕವಾಗಿರುವ ಆಸಕ್ತಿ ಮತ್ತು ಕುತೂಹಲವನ್ನು ನಾವು ಸೆಳೆಯುವುದಾದರೂ ಹೇಗೆ?

ಒಚಿದು ದಾರಿ ಏನೆಂದರೆ, 'ಮಕ್ಕಳಿಗೆ ಬೋಧನೆ' ಮಾಡುವುದರ ಜೊತೆಗೆ ಅವರಿಗೇ ಹೊಸದನ್ನು ಕಂಡುಕೊಳ್ಳಲು, ಪರಿಶೋಧಿಸಲು ಮತ್ತು ತಮ್ಮದೇ ಪರಿಕಲ್ಪನೆಗಳನ್ನು ಅನ್ವಯಿಸಲು ಅವಕಾಶ ನೀಡಬೇಕು. ಮಗುವಿನ ಸುತ್ತಮುತ್ತಲಲ್ಲೇ ಇರುವ ಪರಿಕಲ್ಪನೆಗಳಿಗೆ ಹೆಚ್ಚು ಆಸ್ಪದ ನೀಡುವುದು, ಅವರ ಯೋಚನೆಗಳಿಗೆ ಆಹಾರ ಒದಗಿಸುವುದು ಮತ್ತು ಅವರಿಗೆ ಬೋಧನೆ ಮಾಡಿದ ವಿಷಯಗಳ ಬಗೆಗೆ ಮನನ ಮಾಡಲು ಅವಕಾಶ ನೀಡುವುದರಿಂದ ಅವರಲ್ಲಿ ಸ್ವಾಭಾವಿಕವಾಗಿಯೇ ಕುತೂಹಲ ಹೆಚ್ಚಾಗುತ್ತದೆ ಮತ್ತು ಅವರನ್ನು ಪ್ರೇರೇಪಿಸಿದಂತಾಗುತ್ತದೆ. ಶಿಕ್ಷಕಿಯೊಬ್ಬರು ಇವುಗಳನ್ನು ತಮ್ಮ ತರಗತಿ ಕೊಠಡಿಯಲ್ಲಿ ಅಳವಡಿಸಿಕೊಂಡಿರುವ ಒಂದು ಉದಾಹರಣೆ ಇಲ್ಲಿದೆ;

ಇದು ರಾಯ್‌ಪುರದ ಸರಕಾರಿ ಮಾಧ್ಯಮಿಕ ಶಾಲೆಯ ಸಮಾಜ ವಿಜ್ಞಾನ ಶಿಕ್ಷಕಿಯೊಬ್ಬರು ಹಂಚಿಕೊಂಡಿರುವ ಅನುಭವ. ಮಕ್ಕಳು ಪೂರ್ಣ ಸಾಮರ್ಥ್ಯದಿಂದ ಕೆಲಸ ಮಾಡಲು ಅವರಿಗೆ ವಿಶಾಲವಾದ ಕೊಠಡಿಯ ಅಗತ್ಯವಿದೆ ಎಂಬುದು ಶಿಕ್ಷಕಿಯಾದ ಶ್ರೀಮತಿ ಜೋಷಿ ಅವರ ಅಭಿಪ್ರಾಯ. ಕಲಿಕೆಗೆ ಮಕ್ಕಳೊಂದಿಗೆ ನಿರಂತರವಾಗಿ ತೊಡಗಿಕೊಳ್ಳುವುದು ಉತ್ತಮ ಎಂಬುದನ್ನು ಅವರು ಪ್ರತಿಪಾದಿಸುತ್ತಾರಾದರೂ, ಮಕ್ಕಳಿಗೆ ಸಾಕಷ್ಟು ಸ್ವಾತಂತ್ರ್ಯ ಹಾಗೂ ಪರಿಶೋಧನಾತ್ಮಕ ಕಲಿಕೆಯ ಅಗತ್ಯತೆಯ ಬಗ್ಗೆ ಒತ್ತು ನೀಡುತ್ತಾರೆ. ಇದನ್ನು ಚಟುವಟಿಕೆ ಆಧಾರಿತ ಬೋಧನೆಯ ಮೂಲಕ ಸಾಧಿಸಬಹುದು ಎಂಬುದು ಅವರ ನಂಬಿಕೆಯಾಗಿದೆ. ಇದರಿಂದ ಮಕ್ಕಳು ತರಗತಿಯಲ್ಲಿ ಪಡೆದ ಜ್ಞಾನವನ್ನು ತಮ್ಮ ಬದುಕಿನಲ್ಲಿ ಅಳವಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಅವರು ಪ್ರತಿಪಾದಿಸುತ್ತಾರೆ.

ಅಧ್ಯಾಪನ ವಿಧಾನವನ್ನು ವೈಯಕ್ತಿಕಗೊಳಿಸುವುದು

'छोटे और बड़े उद्योग' (ಸಣ್ಣ ಮತ್ತು ಬೃಹತ್ ಕೈಗಾರಿಕೆಗಳು) ಎಂಬ ಹಿಂದಿ ಪಾಠವನ್ನು ಬೋಧನೆ ಮಾಡುವ ಸಂದರ್ಭದಲ್ಲಿ ಅವರು ಹತ್ತಿರದ ಪಾರ್ಲೆ–ಜಿ ಮತ್ತು ಜಿಂದಾಲ್ ಕಾರ್ಖಾನೆಗಳಿಗೆ ಮಕ್ಕಳ ಭೇಟಿಯನ್ನು ಆಯೋಜಿಸಿದ್ದರು. ಈ ಕೈಗಾರಿಕೆಗಳಿಗೆ ಭೇಟಿ ನೀಡಿದ ಮಕ್ಕಳು ಬೃಹತ್ ಮತ್ತು ಸಣ್ಣ ಕೈಗಾರಿಕೆಗಳ ನಡುವಿನ ವ್ಯತ್ಯಾಸವೇನು ಎಂಬುದನ್ನು ತಮ್ಮದೇ ಆದ ರೀತಿಯಲ್ಲಿ ಪಟ್ಟಿ ಮಾಡುತ್ತ ಹೋದರು. ಮುದ್ರಣಾಲಯ /ಮಾಧ್ಯಮದ ಬಗ್ಗೆ ಅಧ್ಯಯನ ಮಾಡುವ ಸಂದರ್ಭದಲ್ಲಿ ಇನ್ನೊಂದು ತರಗತಿಯ ವಿದ್ಯಾರ್ಥಿಗಳನ್ನು ಬುಕ್ ಫ್ಯಾಕ್ಟರಿಗೆ ಕರೆದೊಯ್ಯಲಾಯಿತು. ನಾಗರಿಕ ಹಾಗೂ ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪಾಠ ಮಾಡುವ ಸಂದರ್ಭದಲ್ಲಿ ತಮ್ಮ ಗ್ರಾಮದಲ್ಲಿಯೇ ಇರುವ ವಿಷಯವೊಂದನ್ನು ಕೈಗೆತ್ತಿಕೊಂಡು ಅದರ ಬಗ್ಗೆ ಸಮೀಕ್ಷೆ ಮಾಡುವಂತೆ ಆಕೆ ವಿದ್ಯಾರ್ಥಿಗಳಿಗೆ ಸೂಚನೆ ನೀಡಿದರು. ಈ ಸಮೀಕ್ಷೆಯ ವಿಷಯಗಳು ಗ್ರಾಮದಲ್ಲಿ ಇರುವ ಸಮಸ್ಯೆಗಳದ್ದಾಗಿದ್ದು ಇವುಗಳ ಬಗ್ಗೆ ಗ್ರಾಮಸ್ಥರ ದೃಷ್ಟಿಕೋನವನ್ನು ದಾಖಲಿಸುವುದಾಗಿತ್ತು ಅಥವಾ ಗ್ರಾಮದ ಜನಸಂಖ್ಯಾ ಸ್ವರೂಪ ಮತ್ತು ಪಂಚಾಯತ್‌ನ ಕಾರ್ಯನಿರ್ವಹಣೆಯ ಬಗ್ಗೆ ಸಮೀಕ್ಷೆ ಮಾಡಬೇಕಾಗಿತ್ತು. ಈ ಸಮೀಕ್ಷೆಗಳನ್ನು ತರಗತಿಯಲ್ಲಿ ಚರ್ಚಿಸಲಾಯಿತು. ವಿದ್ಯಾರ್ಥಿಗಳು ವಿರಾಮದ ವೇಳೆ ಈ ಸಮೀಕ್ಷೆಯ ಬಗ್ಗೆ ತಮ್ಮ ಸಹಪಾಠಿಗಳ ಜೊತೆಗೆ ಚರ್ಚೆ ಮಾಡುವುದು ಕಂಡುಬಂದಿತು.

ಸ್ವತಂತ್ರ ಹಾಗೂ ಪರಿಶೋಧನಾತ್ಮಕ ಕಲಿಕೆ

ಶ್ರೀಮತಿ ಜೋಷಿ ಅವರು 45 ನಿಮಿಷಗಳ ಅವಧಿಯಲ್ಲಿ ಎರಡು ತರಗತಿಗಳಿಗೆ ಪಾಠ ಮಾಡಬೇಕಾದ ಸಂದರ್ಭವಿತ್ತು, ಒಂದು ತರಗತಿಯ ವಿದ್ಯಾರ್ಥಿಗಳು ಅವರು ನೀಡಿದ ಚಟುವಟಿಕೆಯನ್ನು ಮಾಡುತ್ತಿರುವಾಗ ಇನ್ನೊಂದು ತರಗತಿಯ ಕಡೆ ಗಮನಹರಿಸಿದರು. ವಿಭಿನ್ನ ರೀತಿಯ ಕೈಗಾರಿಕೆಗಳ ಕುರಿತಂತೆ ಶ್ರೀಮತಿ ಜೋಷಿ ಅವರು ಸುಮಾರು 15 ನಿಮಿಷಗಳ ಕಾಲ ಬೋಧನೆ ಮಾಡಿದರು. ಆ ಬಳಿಕ ಅವರು ವಿದ್ಯಾರ್ಥಿಗಳನ್ನು ಎರಡು ಗುಂಪುಗಳಾಗಿ ವಿಭಜಿಸಿ ಅವರಿಗೆ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಅವರದ್ದೇ ಪರಿಕಲ್ಪನೆಯಲ್ಲಿ ಕೆಲಸ ಮಾಡುವ ಚಟುವಟಿಕೆ ನೀಡಿದರು. (ನಿಮ್ಮ ಗ್ರಾಮದಲ್ಲಿ ನೀವು ನೋಡಿರುವ ಎಲ್ಲ ಕೈಗಾರಿಕೆಗಳ ಬಗ್ಗೆ ಯೋಚಿಸಿ ನೀವು ಕಲಿತ ವಿಭಾಗಗಳಲ್ಲಿ ಅವುಗಳನ್ನು ವರ್ಗೀಕರಣ ಮಾಡಬೇಕು ಎನ್ನುವ ಕೆಲಸ). ಮಕ್ಕಳಿಗೆ ಅತ್ಯಂತ ಆಪ್ತವಾದ ಕೆಲಸವನ್ನು ನೀಡಿದರೆ ಶಿಕ್ಷಕರು ತರಗತಿಯಲ್ಲಿ ಇಲ್ಲದೇ ಇದ್ದರೂ ಕೂಡ ಆ ಕೆಲಸವನ್ನು ಮಾಡಲು ಅವರಿಗೆ ಅದು ಪ್ರೇರಣೆ ನೀಡುತ್ತದೆ. ಒಂದು ಪರಿಕಲ್ಪನೆಯನ್ನು ಸ್ವತಂತ್ರವಾಗಿ ಪರಿಶೋಧನೆ ಮಾಡಲು ಮಕ್ಕಳಿಗೆ ಅವಕಾಶ ನೀಡಿದರೆ ಮಕ್ಕಳು ಅಂತಹ ಅವಕಾಶವನ್ನು ಅತ್ಯಂತ ಸಂತೋಷದಿಂದಲೇ ಬಳಸಿಕೊಳ್ಳುವುದನ್ನು ನಾವು ಕಾಣಬಹುದು.ii

ಸಾಮಾನ್ಯವಾಗಿ ಅಕಾಲಿಕವಾದ ಮೌಲ್ಯಮಾಪನ ಅಥವಾ ಮಗುವಿನ ಕಲಿಕೆಯ ಸಾಮರ್ಥ್ಯವನ್ನು ಅಂದಾಜು ಮಾಡಲಾಗದ ವಿಧಾನದಲ್ಲಿ ಮೌಲ್ಯಮಾಪನ ಮಾಡಿದಾಗ 'ಈ ಮಗುವು ಕಲಿಯುವುದರಲ್ಲಿ ಹಿಂದಿದೆ ಅಥವಾ ಕಲಿಯುವ ಸಾಮರ್ಥ್ಯ ಇಲ್ಲ' ಎಂಬ ತೀರ್ಮಾನಕ್ಕೆ ಬರಲಾಗುತ್ತದೆ. ಹಾಗಂತ ಪ್ರತಿಯೊಂದು ಮಗುವನ್ನೂ ವಿಭಿನ್ನವಾದ ಮೌಲ್ಯಮಾಪನಕ್ಕೆ ಒಳಪಡಿಸುವುದು ಸಾಧ್ಯವಾಗದೇ ಇರಬಹುದು; ಶಾಲೆಗಳಿಗೆ ಕೆಲವು ಸ್ವರೂಪ ಮತ್ತು ಪ್ರಮಾಣೀಕರಣ ಇರಬೇಕಾಗುತ್ತದೆ. ಕನಿಷ್ಠ ಕೆಲವು ವಿಧಾನದಲ್ಲಿಯಾದರೂ ಮಗುವು ಕಲಿಯುವ ಅವಕಾಶ ಪಡೆಯುವಂತಾಗಲು ಕೆಲವು ರೀತಿಯಲ್ಲಿ ಮೌಲ್ಯ–ಮಾಪನವನ್ನು ಮಾಡುವುದರಲ್ಲಿ ಅರ್ಥವಿದೆ. ಉದಾಹರಣೆಗೆ, ಮೌಖಿಕ, ಸೃಜನಶೀಲ ಅಭಿವ್ಯಕ್ತಿಗಳನ್ನು ಪ್ರದರ್ಶಿಸಲು ಅವಕಾಶ ಇರುವ ಲಿಖಿತ ಪರೀಕ್ಷೆಗಳ ಅವಕಾಶವನ್ನು ಒದಗಿಸುವುದು.

ಕಲಿಕೆಯಲ್ಲಿನ ಗತಿ ಮತ್ತು ಶೈಲಿಯಲ್ಲಿನ ವ್ಯತ್ಯಾಸ ತಿಳಿಯಲು ಮೌಲ್ಯಮಾಪನ

ಇವೆಲ್ಲದರ ಜೊತೆಗೆ, ಪ್ರತಿಯೊಂದು ಮಗುವೂ ವಿಭಿನ್ನವಾದ ಗತಿಯಲ್ಲಿ ಕಲಿಯುತ್ತಿರುತ್ತದೆ; ನಿರಂತರ ಹಾಗೂ ಸಮಗ್ರ ಮೌಲ್ಯಮಾಪನದ ಭಾಗವಾಗಿ, ಕೇವಲ ಫಲಿತಾಂಶದ ಮೇಲೆ ಮಾತ್ರ ಗಮನ ಕೇಂದ್ರೀಕರಿಸುವುದರ ಬದಲಿಗೆ ಕಲಿಕೆಯಲ್ಲಿ ಮಕ್ಕಳ ಪ್ರತಿ ಹಂತದ ಪ್ರಗತಿಯನ್ನು ದಾಖಲಿಸಲು ಅನೇಕ ಪ್ರಕ್ರಿಯೆಗಳನ್ನು ಅಳವಡಿಸಿಕೊಳ್ಳಬಹುದಾಗಿದೆ. ಇಲ್ಲಿ ಕೆಲವು ಉದಾಹರಣೆಗಳನ್ನು ಗಮನಿಸಬಹುದು;

ಮಗುವಿನ ಸಾಮರ್ಥ್ಯ ಮತ್ತು ಗತಿಯ ಮೇಲೆ ಕೇಂದ್ರೀಕರಿಸಿದ ಶಿಕ್ಷಕರ ಅಧ್ಯಾಪನದ ಬಗೆಗಿನ ವರದಿಯನ್ನು ಇಲ್ಲಿ ನೀಡಲಾಗಿದೆ. ಒಂದು ಸೆಮಿಸ್ಟರ್‌ನ ಅವಧಿಯಲ್ಲಿ ಕಲಿಯುವ ವಿದ್ಯಾರ್ಥಿಗಳ ಹೆಸರು ಮತ್ತು ಅವರು ಕಲಿಯುವ ಕೌಶಲ್ಯಗಳನ್ನು ಒಂದು ಎಕ್ಸೆಲ್ ಶೀಟ್‌ನಲ್ಲಿ ಬರೆದಿಡಬೇಕು. ಪ್ರತಿ ತರಗತಿಯೂ ಈ ವ್ಯವಸ್ಥೆಯನ್ನು ಹೊಂದಿರಬೇಕು. ವಿದ್ಯಾರ್ಥಿಗಳು ನಾನಾ ವಿಷಯಗಳಿಗೆ ಬೇರೆ ಬೇರೆ ಕಾಲಾವಧಿಯನ್ನು ಪಡೆಯುವ ಸಾಧ್ಯತೆ ಇರುವುದರಿಂದ, ಅವರ ಅಗತ್ಯಕ್ಕೆ ತಕ್ಕಂತೆ ಪ್ರತಿ ವಿಷಯದ ಮೇಲೆ ಸಮಯ ಕಳೆಯಲು ತರಗತಿಯಲ್ಲಿ ಅವಕಾಶ ನೀಡಬೇಕು. ವಿದ್ಯಾರ್ಥಿಗಳ ಪ್ರಗತಿಯನ್ನು ಒಂದು ಟಿಕ್‌ನಿಂದ (ಸರಿ ಗುರುತು) ಎರಡು ಟಿಕ್ ಮಾರ್ಕ್‌ಗಳು ಹಾಗೂ ಸಂಪೂರ್ಣ ಕೌಶಲ್ಯ ಗಳಿಸಿದ ಮೇಲೆ ಮೂರು ಟಿಕ್ ಮಾರ್ಕ್‌ಗಳನ್ನು ನಮೂದಿಸುವ ಮೂಲಕ ದಾಖಲಿಸಬೇಕು. ಇದರಿಂದ ಆ ದಿನದ ತರಗತಿಯಲ್ಲಿ ಮಗು ಏನು ಮಾಡಿರುತ್ತದೋ ಅದು ಭಾಗಶಃ ಆಕೆ/ಆತನ ಚಾರ್ಟ್‌ನ್ನು ಅವಲಂಬಿಸಿರುತ್ತದೆ.[iii]

ಒಟ್ಟಾರೆಯಾಗಿ, ಮಗುವು ಕಲಿಕೆಯಲ್ಲಿ ಯಾಕೆ ವಿಫಲವಾಗುತ್ತದೆ ಎಂಬುದಕ್ಕೆ ಅನೇಕ ಕಾರಣಗಳಿವೆ ಎಂಬುದನ್ನು ನೆನಪಿನಲ್ಲಿಟ್ಟು-ಕೊಳ್ಳಬೇಕು. ಆದರೆ, ಮಕ್ಕಳು ಹೇಗೆ ಕಲಿಯುತ್ತಾರೆ, ಅಧ್ಯಾಪನದ ಕೆಲಸ ಹಾಗೂ ವಿಷಯವನ್ನು ಹೇಗೆ ನಿರ್ವಹಿಸಲಾಗಿದೆ ಮತ್ತು ಮೌಲ್ಯಮಾಪನವನ್ನು ಹೇಗೆ ಮಾಡಲಾಗಿದೆ ಹಾಗೂ ಎಲ್ಲಕ್ಕಿಂತ ಹೆಚ್ಚಾಗಿ ಮಕ್ಕಳ ಅಭ್ಯುದಯಕ್ಕೆ ಯಾವ ರೀತಿ ಅವಕಾಶ ಕಲ್ಪಿಸಲಾಗಿದೆ ಎನ್ನುವ ನಂಬಿಕೆಯ ಮೇಲೆಯೇ ಇವೆಲ್ಲ ಪ್ರತಿಬಿಂಬಿತವಾಗಿದೆ.

ವಿದ್ಯಾರ್ಥಿಯ ಹೆಸರು	ಎ-ಝುಡ್	ಹೂವಿನ ಹೆಸರು	ಹಣ್ಣಿನ ಹೆಸರು	ತಿಂಗಳುಗಳು	ಸಂಬಂಧ	ಲಿಖಿತ	ಎಣಿಕೆ
ರಾಘವ್	✓	✓✓	✓✓	✓	✓✓	✓	✓
ನೇಹಾ	✓	✓✓	✓	✓✓	✓	✓✓	✓✓

[i] https://practiceconnect.azimpremjiuniversity.edu.in/a-teacher-transformed-through-training/
[ii] https://practiceconnect.azimpremjiuniversity.edu.in/teacher-as-the-epicentre-for-change/
[iii] https://practiceconnect.azimpremjiuniversity.edu.in/integrating-schools-into-social-fabric-of-community/

ಆಕರಗಳು ಮತ್ತು ಹೆಚ್ಚಿನ ಓದಿಗಾಗಿ

ಹೋಲ್ಟ್, ಜೆ.ಸಿ., & ಫ್ರಾಮ್ಮೆ ಎ. (1964), ಹೌ ಚಿಲ್ಡ್ರನ್ ಫೇಲ್ (ಸಂ.5), ನ್ಯೂಯಾರ್ಕ್: ಪಿಟ್‌ಮ್ಯಾನ್

https://practiceconnect.azimpremjiuniversity.edu.in



ರಿತಿಕಾ ಗುಪ್ತಾ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದಲ್ಲಿ ಉಪನ್ಯಾಸಕಿಯಾಗಿದ್ದಾರೆ. ಮನಶಾಸ್ತ್ರಜ್ಞರಾಗಿರುವ ಇವರು ಕಲೆ ಆಧಾರಿತ ಚಿಕಿತ್ಸಾ ಶಾಸ್ತ್ರಜ್ಞರೂ ಹೌದು. ಮುಖ್ಯವಾಗಿ ಅವರು ಮಾನಸಿಕ ಸೌಖ್ಯ, ಅದರಲ್ಲೂ ವಿಶೇಷವಾಗಿ ಮಕ್ಕಳ ಮಾನಸಿಕ ಸೌಖ್ಯದ ಬಗೆಗಿನ ಪ್ರತಿಬಂಧಕ ಹಾಗೂ ಪ್ರೋತ್ಸಾಹಕ ಉಪಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ತುಲನಾತ್ಮಕ ಅಧ್ಯಾಪನಶಾಸ್ತ್ರ, ಶಾಲೆಗಳಲ್ಲಿ ಸಾಮಾಜಿಕ-ಭಾವನಾತ್ಮಕ ಕಲಿಕೆಯ ಸಮಗ್ರತೆ ಮತ್ತು ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪರಿಣಾಮಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಅವರು ಆಸಕ್ತರಾಗಿದ್ದಾರೆ. ಅವರನ್ನು ಈ ಮಿಂಚಂಚೆಯಲ್ಲಿ ಸಂಪರ್ಕಿಸಬಹುದು. ritika.gupta@azimpremjifoundation.org

ಅನುವಾದ: **ಮಂಜುನಾಥ್ ಚಾಂದ್** । ಪರಿಶೀಲನೆ: **ಲತಾ ಕೆ ಸಿ**